ಕರ್ನಾಟಕ ಸರ್ಕಾರ

ಸಂ. ಆರ್ ಡಿ 18ಎಂ.ಆರ್ ಆರ್ /2011/12 (5)

ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು ದಿನಾಂಕ 13-09-2011

## ಸುತ್ತೋಲೆ

**ವಿಷಯ:** . ಯುಪಿಓಆರ್ ತಂತ್ರಾಂಶದಲ್ಲಿ ವಿಚಾರಣಾಧಿಕಾರಿಗಳು ಪರ್ಯಾವೇಕ್ಷಕರು ಮತ್ತು ಭೂಮಾಪಕರಿಗೆ ಬ್ಲಾಕುಗಳನ್ನು ನೀಡುವ ಕುರಿತು.

• • •

5 ನಗರಗಳ ಪೈಕಿ 3 ನಗರಗಳಲ್ಲಿ ಹಕ್ಕು ವಿಚಾರಣಾ ಪ್ರಕ್ರಿಯೆಯು ಮುಂದುವರೆದ ಹಂತದಲ್ಲಿರುತ್ತದೆ. ಸದರಿ ವಿಚಾರಣಾ ಪ್ರಕ್ರಿಯೆ ಕೆಲಸಕ್ಕೆ ಹಲವು ವಿಚಾರಣಾಧಿಕಾರಿಗಳು, ಪರ್ಯಾವೇಕ್ಷಕರು ಹಾಗೂ ಭೂಮಾಪಕರುಗಳನ್ನು ನೇಮಿಸಲಾಗಿದೆ. ಸದರಿ ಅಧಿಕಾರಿಗಳಿಗೆ ಪ್ರತ್ಯೇಕವಾದ ಪ್ರದೇಶ/ಬ್ಲಾಕುಗಳನ್ನು ಹಂಚಿಕೆ ಮಾಡುವುದು ಬಹುಮುಖ್ಯವಾಗಿರುತ್ತದೆ. ಇದರಿಂದ ಅವರ ಕೆಲಸ ಸಾಮರ್ಥ್ಯವನ್ನು ಪರಿಗಣಿಸಿ ಜವಾಬ್ದಾರಿಯನ್ನು ನಿಗಧಿಪಡಿಸಬಹುದಾಗಿದೆ.

ವಿಚಾರಣಾ ಪ್ರಕ್ರಿಯೆಗೆ ಸಂಬಂಧಿಸಿದ ಟೆಕ್ನಿಕಲ್ ಸರ್ವಿಸ್ ಪ್ರೊವೈಡರ್ ನ ಸಾಫ್ಟ್ ವೇರ್ ನಲ್ಲಿ ಬ್ಲಾಕುಗಳನ್ನು ಭೂಮಾಪಕರಿಗೆ ಪರ್ಯಾವೇಕ್ಷಕರಿಗೆ ಹಾಗೂ ವಿಚಾರಣಾಧಿಕಾರಿಗಳಿಗೆ ನೀಡುವ ಅವಕಾಶವಿರುತ್ತದೆ. ಸದರಿ ಸಾಫ್ಟ್ ವೇರ್ ನ್ನು ಉಪಯೋಗಿಸಿಕೊಂಡು ಮೂರು ಹಂತದಲ್ಲಿ ವಿವಿಧ ಅಧಿಕಾರಿಗಳಿಗೆ ಕೆಲಸದ ಪ್ರಮಾಣಕ್ಕನುಸಾರವಾಗಿ ಬ್ಲಾಕುಗಳನ್ನು ಸಮನಾಗಿ ಹಂಚಿಕೆ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.

ಬ್ಲಾಕುಗಳನ್ನು ಪ್ರತ್ಯೇಕವಾಗಿ ಭೂಮಾಪಕರ ಹಂತದಲ್ಲಿ ಅವರಿಗೆ ಹಂಚಿಕೆ ಮಾಡುವುದು, ಭೂಮಾಪಕರು ಸದರಿ ಚಾಲ್ತಾವನ್ನು ಪೂರ್ಣಗೊಳಿಸಿದ ನಂತರ ಪರ್ಯಾವೇಕ್ಷಕರ ಹಂತದಲ್ಲಿ ಸದರಿ ಬ್ಲಾಕನ್ನು ತೋರಿಸಬಹುದು. ಸದರಿ ಪ್ರಕರಣಗಳು ಪರ್ಯಾವೇಕ್ಷಕರಿಂದ ಪೂರ್ಣಗೊಂಡ ನಂತರ ವಿಚಾರಣಾಧಿಕಾರಿಗಳ ಹಂತದಲ್ಲಿ ತೋರಿಸುವುದು.

ಸದರಿ ಸೌಲಭ್ಯವು ಈಗಾಗಲೇ ಸಾಫ್ಟ್ ವೇರ್ ನಲ್ಲಿ ಲಭ್ಯವಿರುತ್ತದೆ ಹಾಗೂ ಕೂಡಲೇ ಮೂರು ಹಂತಗಳಲ್ಲಿಯೂ ಸಹ ಬ್ಲಾಕುಗಳನ್ನು ಹಂಚಿಕೆ ಮಾಡಬಹುದಾಗಿದೆ. ಎಂ.ಐ.ಎಸ್. ವರದಿಯು ಸಹ ಈಗಾಗಲೇ ಲಭ್ಯವಿರುತ್ತದೆ ಹಾಗೂ ಕಾರ್ಯಗತಗೊಳಿಸಲಾಗಿದ್ದು ,ಇದರಿಂದ ಪ್ರತಿದಿನ ಮೂರು ಹಂತಗಳಲ್ಲಿ ಪ್ರತಿ ಅಧಿಕಾರಿಗಳ ಕೆಲಸದ ಸಾಮರ್ಥ್ಯವನ್ನು ತೋರಿಸುತ್ತದೆ.

ಆದ್ದರಿಂದ 3 ನಗರಗಳ (ಮೈಸೂರು, ಶಿವಮೊಗ್ಗ ಹುಬ್ಬಳ್ಳಿ-ಧಾರವಾಡ) ಯೋಜನಾಧಿಕಾರಿಗಳು ಬ್ಲಾಕುಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದನ್ನು ಧೃಡಪಡಿಸಿಕೊಳ್ಳುವುದು ಹಾಗೂ ಈ ಸುತ್ತೋಲೆ ಹೊರಡಿಸಿದ ಕೂಡಲೇ ಅನುಷ್ಠಾನ ವರದಿಯನ್ನು ಒಂದು ವಾರದೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(ರಾಜೀವ ಚಾವ್ಲಾ) 13/9/11
ಕಾರ್ಯದರ್ಶಿಗಳು(ಭೂಮಿ ಮತ್ತು ಯುಪಿಓಆರ್)
ಕಂದಾಯ ಇಲಾಖೆ, ಬೆಂಗಳೂರು.